ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ:ಕರಾಸಾ/ಕೇಂಕ/ಸಂ/ಕಾ/ಮಂಡ್ಯ-03/ 798 /16-17 ದಿನಾಂಕ 13 /05/2016

ಶ್ರೀ ಕೃಷ್ಣ ಕಿಶೋರ್ ಎಂ.ಬಿ.,
ಕಾರ್ಯದರ್ಶಿಗಳು,
ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ & ಮ್ಯಾನೇಜ್‌ಮೆಂಟ್.
ಜ್ಞಾನವಾಹಿನಿ ಶಿಕ್ಷಣ ಸಂಸ್ಥೆ, 676/3, "ಓಂ ನಿಲಯ",
80 ಅಡಿ ರಸ್ತೆ, ಆಲನಹಳ್ಳಿ ಬಡಾವಣೆ, ಮೈಸೂರು-570028

ಮಾನ್ಯರೆ,

ವಿಷಯ: ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ & ಮ್ಯಾನೇಜ್‌ಮೆಂಟ್ ಬಳಿ ಬಸ್ ನಿಲುಗಡೆ ನೀಡುವ ಬಗ್ಗೆ-

ಉಲ್ಲೇಖ: ತಮ್ಮ ಮನವಿ ಪತ್ರಸಂಖ್ಯೆ: 12/MYCEM ದಿನಾಂಕ: 06.08.2015

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ & ಮ್ಯಾನೆಜಮೆಂಟ್ ಬಳಿ ನಿಗಮದ ಸಾರಿಗೆಗಳಿಗೆ ನಿಲುಗಡೆ ನೀಡುವಂತೆ ಕೋರಿರುವ ತಮ್ಮ ಮನವಿಯನ್ನು ಪರಿಶೀಲಿಸಲಾಯಿತು.

ಪ್ರಸ್ತುತ ನಿಗಮದ ಮೈಸೂರು ನಗರ ಸಾರಿಗೆ ವಿಭಾಗದ ವತಿಯಿಂದ ಪ್ರತಿನಿತ್ಯ 22 ನಗರ ಸಾರಿಗೆಗಳಿಂದ 70 ನಡೆಗಳು ಕಾರ್ಯಾಚರಣೆಯಲ್ಲಿದ್ದು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ & ಮ್ಯಾನೇಜ್‌ಮೆಂಟ್ ಬಳಿ ನಿಲುಗಡೆಯನ್ನು ನೀಡಲಾಗುತ್ತಿರುತ್ತದೆ. ಹಾಗೂ ಪ್ರಸ್ತುತ ಒದಗಿಸಲಾಗಿರುವ ಸಾರಿಗೆ ಸೌಲಭ್ಯ ಸಮರ್ಪಕವಾಗಿರುತ್ತದೆ.

ಮುಂದುವರೆದು, ಕ.ರಾ.ರ.ಸಾ.ನಿಗಮವು ಶಾಲಾ ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಿಯಾಯಿತಿ ದರದಲ್ಲಿ ನಿಗದಿತ ಮಾರ್ಗದಲ್ಲಿ ಖಾಯಂ ಗುತ್ತಿಗೆ ಸುತ್ತುವಳಿಯನ್ನು ಪಡೆಯುವ ಸೌಲಭ್ಯವನ್ನು ಒದಗಿಸಿರುತ್ತದೆ. ತಾವುಗಳ ಸದರಿ ಸೌಲಭ್ಯವನ್ನು ಪಡೆಯಲು ಇಚ್ಛಿಸಿದಲ್ಲಿ ಹತ್ತಿರದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಿಭಾಗೀಯ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಹಾಲಿ ಲಭ್ಯವಿರುವ ಸಾರಿಗೆ ಸೌಲಭ್ಯವನ್ನು ಪಡೆದು ಕ.ರಾ.ರ.ಸಾ.ನಿಗಮದೊಂದಿಗೆ ಸಹಕರಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ